ಟಿ.ಎಂ. ಮಾನಪ್ಪ, ಶಿವಮೊಗ್ಗ
ಜಮೀನಿಗೂ, ಮೀನಿಗೂ ಎಂತಹ ಸಂಬಂಧ?



ನೀರಿನದೇ; ನೀರಿಲ್ಲದಿದ್ದರೆ ಎರಡೂ ಬರಡು.

ಎಚ್.ಎಂ. ಅನಂತಪದ್ಮನಾಭ, ಮೈಸೂರು
'ಶನಿ'ಗ್ರಹಕ್ಕೇ ಕ್ಷಿಪಣಿ ಉಡಾಯಿಸಿ 'ಶನಿ'ಕಾಟ ಇಲ್ಲದಂತೆ ಏಕೆ ಮಾಡಬಾರದು?
ಆ ಶನಿ ಬರುವಾಗಲೋ, ಹೋಗುವಾಗಲೋ ಒಳಿತು ಮಾಡುತ್ತಾನೆ. ಇಲ್ಲಿನ ಶನಿಗಳ ಬಗ್ಗೆ ಯೋಚಿಸಿ.

ಶೃತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ದೇವರುಗಳಿಗೆ ಎರಡೆರಡು ಪತ್ನಿಯರು ಇರುವುದು ಏಕೆ?
ದೇವ ಜಗವೆಂಬ ಸರ್ಕಾರದ ಪ್ರಧಾನಿ. ಸರ್ಕಾರಕ್ಕೆ ಹೋಂ ಮಿನಿಸ್ಟರ್, ಎಕ್ಸ್‌ಟರ್ನಲ್ ಅಫೇರ್ಸ್ ಮಿನಿಸ್ಟರ್ ಇರಬೇಕಲ್ಲ.

ವಿ. ಹೇಮಂತಕುಮಾರ್, ಬೆಂಗಳೂರು
ಗಂಡ ಶ್ರೀಮಂತ ಆಗೋವರೆಗೂ ಹೆಂಡತಿ ಸೀಮಂತ ಬೇಡ ಅಂತಿದಾಳಲ್ಲಾ...?




ಮಗುವನ್ನು ಕಾನ್ವೆಂಟಿಗೆ ಸೇರಿಸಲು ಲಕ್ಷಗಳು ಬೇಕಲ್ಲ; ಗುಡ್ ಡಿಸಿಷನ್.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಚಿಕ್ಕಮಕ್ಕಳ ಸ್ವಭಾವ ದೊಡ್ಡವರಿಗೂ ಬಂದರೆ ಹೇಗಿರುತ್ತೆ ಸಾರ್?
ಮೆಂಟಲಿ ರಿಟಾರ್ಡೆಡ್ ಎಂದು ಟ್ರೀಟ್‌ಮೆಂಟ್ ಕೊಡಬೇಕಾಗತ್ತೆ.

ಕೆ.ವಿ. ಗೋವಿಂದಾಚಾರಿ, ಮೈಸೂರು
ಒಬ್ಬನೇ ಮಗನಿರುವ ಮನೆಗೆ ಹುಟ್ಟಾ ಅಣ್ತಮ್ಮಂದ್ರು, ಬೆಳೀತಾ ದಾಯಾದಿಗಳು ಎಂಬ ಗಾದೆ ಪ್ರಸ್ತುತವಾಗದಲ್ಲ...?
ಇಲ್ಲಿನ ಗಾದೆಯೇ ಬೇರೆ; ಹುಟ್ಟಾ ಹುಟ್ಟಾ ಪ್ಲೇಹೋಮು; ಬೆಳೀತಾ ಬೆಳೀತಾ ಓಲ್ಡೇಜ್ ಹೋಮು.

ಮೋಹನರಾಜು ಎಸ್.ಎ. ಶಿವಮೊಗ್ಗ
ವಿನಾಶಕಾಲೇ ವಿಪರೀತ ಬುದ್ಧಿ. ಚುನಾವಣಾ ಕಾಲೇ...?
ವಿಷಪೂರಿತ ಸುದ್ದಿ; ವಿಪರೀತ ರದ್ದಿ.

ಪಿ. ಜಯವಂತ ಪೈ, ಕುಂದಾಪುರ
ಒಬ್ಬೊಬ್ಬ ದೇವರ ಕೈಯಲ್ಲಿ ಒಂದೊಂದು ಆಯುಧ ಏಕೆ?
ಯಾವ ಆಯುಧಗಳ ಪೇಟೆಂಟ್, ಕಾಪಿರೈಟ್, ಲೋಗೊ ಯಾವ ದೇವರದೆಂದು ತೋರಿಸಲು.

ಎಸ್.ಎ. ಮೋಹನರಾಜು, ಶಂಕರಘಟ್ಟ
ಸಂತೋಷದ ಬದುಕಿನ ಸರಳ ಸೂತ್ರವೇನು ತಿಳಿಸುವಿರಾ ರಾಮ್‌ಜೀ?
ಸರಳುಗಳ ಹಿಂದೆ ಹೋಗಲು ಲಾಯಕ್ಕಾದ ಯೋಚನೆ, ಕೆಲಸ ಮಾಡದಿರುವುದು.

ಕೃಷ್ಣಮೂರ್ತಿ ಎಸ್, ಬೆಂಗಳೂರು
ಕಣ್ಣು ಮತ್ತು ಮನಸ್ಸು; ಇವೆರಡರಲ್ಲಿ ಕಾಮನೆಗಳ ಉಗಮ ಸ್ಥಳ ಯಾವುದು?
ಮನವೇ; ಚಿತ್ತದಲ್ಲಿ ಬಯಕೆ ಮೂಡದಿದ್ದರೆ ಕಾಮಕ್ಕೆ ಫುಲ್‌ಸ್ಟಾಪ್.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ಕವಿ ಮತ್ತು ವೇದಾಂತಿ; ಇವರಿಬ್ಬರಲ್ಲಿ ಯಾರು ಹೇಳಿದ್ದು ಸತ್ಯವಾಗಿರತ್ತೆ ಸರ್?
ಒಂದು ಕಲ್ಪನೆ, ಒಂದು ಅಧ್ಯಾತ್ಮ, ಇವೆರಡರ ಸರಾಸರಿಯೇ ಜೀವನ, ಸತ್ಯ.

ಕೆ.ಎಂ. ವಿಭೂತಿ, ಹರಿಹರ
ವಿಶ್ವಸುಂದರಿಯರು ವಿಶ್ವದ ಆಸ್ತಿಯೋ, ರಸಿಕರ ಆಸ್ತಿಯೋ?
ಅವರ ಸೌಂದರ್ಯಕ್ಕೆ ಕಾರಣವಾದ ಕ್ರೀಂ, ಪೇಸ್ಟ್, ಪೌಡರ್ ಕಂಪನಿಗಳ ಆಸ್ತಿ.

ಪೇಂಟರ್ ಪಾಪು, ಸಂತೇಮರಹಳ್ಳಿ
ಮದುವೆಯಾದ ಮೇಲೆ ಜೀವನ ಬದಲಾಗುವುದೋ, ಜನರು ಬದಲಾಗುವರೋ?
ಜನರೇ; ಅಮ್ಮ ಅತ್ತೆಯಾಗುವಳು, ಗಂಡು ಕೊಂಬು ಕಳೆದುಕೊಂಡು ಗಂಡ ಆಗುವನು...

## ಬಹುಮಾನಿತ ಪ್ರಶ್ನೆ

ವಿ. ಹಮೀದ್, ವಿಟ್ಲ
ವಿವಾಹಿತನು ತನ್ನ ಸ್ನೇಹಿತನಿಗೆ ವಿವಾಹ ಆಗಬೇಡ ಎನ್ನುವುದೇಕೆ?
ಪತ್ನಿ ಮನೆಯಿಂದ ಹೊರಗಟ್ಟಿದರೆ ಉಳಿದುಕೊಳ್ಳಲೊಂದು ಬ್ಯಾಚುಲರ್ಸ್ ಪ್ಲೇಸ್ ಬೇಕಲ್ಲ.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ
ಶ್ರೀಮಂತ ದಿರಿಸು, ಆಕರ್ಷಕ ಬಟ್ಟೆ ಧರಿಸಿದವರು ಹೆಚ್ಚು ಆತ್ಮೀಯವಾಗಿ ಕಾಣುವುದಿಲ್ಲ. ಏಕೆ?
ಬಟ್ಟೆ ಹಾಳಾಗುವುದೆಂದು ಮಗಾ, ಮಚ್ಚಾ ಎನ್ನುತ್ತಾ ಎಲ್ಲೆಂದರಲ್ಲಿ, ಹೇಗೆಂದರೆ ಹಾಗೆ ಕೂಡದಿರುವುದರಿಂದ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ನಿಸರ್ಗ ನಿಯಮಗಳೇ ಬದಲಾಗುತ್ತಿವೆಯಲ್ಲ....?
ನರನ ಉರಸ್ಸು, ಶಿರಸ್ಸು ಧರೆಗೆ ಎರವಾದರೆ ನಿಯಮ ಯಮವಾಗುತ್ತದೆ.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
ಗೃಹಪ್ರವೇಶದ ಲಗ್ನಗಳು ಬೆಳಗಿನ ಜಾವವೇ ಹೆಚ್ಚು. ಏಕೆ?



ಚಿಕ್ಕ ಸ್ಥಳ, ದಟ್ಟ ಹೊಗೆ; ಬಂದವರಿಗೆ ಕಷ್ಟವಾಗದಿರಲು ಬರುವ ಮುನ್ನವೇ ಲಗ್ನ.

ಗಣಪತಿ ಕಂಚಿಪಾಲ, ತೆಲಂಗಾರ
ಇಲ್ಲೊಬ್ಬನಿಗೆ ಎರಡು ಹೆಂಡಿರಲ್ಲಿ ಒಬ್ಬಳು ಬುದ್ಧಿವಂತೆ, ಒಬ್ಬಳು ದಡ್ಡಿ. ಗಂಡನ ಗತಿ ಏನು?
ಸರಾಸರಿ; ದಡ್ಡಿಯನ್ನೊಲಿಸಲು ಸರ; ಬುದ್ಧಿವಂತೆಯನ್ನೊಲಿಸಲು ಅವಳು ಹೇಳಿದ್ದಕ್ಕೆಲ್ಲ ಸರಿ.

ಮಾಲತಿರಾಜು, ಬೆಂಗಳೂರು
ಅಭಿವೃದ್ಧಿಯೇ ಆಡಳಿತ ಮಂತ್ರ; ಜನರದ್ದೋ, ಜನನಾಯಕರದ್ದೋ?
ಧನನಾಯಕರದ್ದು.

■ ರಾಮ್